


## ಫೇಸ್‌ಬುಕ್ ಸ್ಟಿಕರ್ಡ್ಸ್ ಫಾರ್ ಮೆಸೆಂಜರ್

ಛಾಯಾಚಿತ್ರಗಳಿಗೆ ಸ್ಟಿಕರ್ ಅಲಂಕಾರ ಮಾಡಿ ಫೇಸ್‌ಬುಕ್ ಮೆಸೆಂಜರ್ ಅಥವಾ ಬೇರೆ ಕಡೆ ಬಳಸಬಹುದು. ಯಾವುದೇ ಸೆಟಪ್ ಅವಶ್ಯಕತೆ ಇಲ್ಲ. ಚಿತ್ರಗಳಿಗೆ ಕಾರ್ಟೂನ್ ರೀತಿಯ ಹಿನ್ನೆಲೆ ಒದಗಿಸಬಹುದು. ಐಫೋನ್‌ನ ಈ ಆ್ಯಪ್ ಉಚಿತವಾಗಿದ್ದು, ಸ್ಮೈಲೀಸ್, ಕಾರ್ಟೂನ್ ಪ್ರಾಣಿಗಳನ್ನು ಸೇರಿಸಬಹುದು. ಜೊತೆಗೆ ನಿಮ್ಮ ಚಿತ್ರಗಳ ಮೇಲೆ ಬರಹವನ್ನೂ ಸೇರಿಸಬಹುದು. ಆ್ಯಪ್ ಡೌನ್‌ಲೋಡ್ ಮಾಡಿದ ಬಳಿಕ ಕ್ಯಾಮೆರಾಗೆ ಸಂಪರ್ಕ ಕಲ್ಪಿಸಬೇಕು. ಒಟ್ಟು 50 ಬಗೆಯ ಸ್ಟಿಕರ್‌ಗಳಿದ್ದು, ಬೇಡವಾದಾಗ ಸ್ಟಿಕರ್ ಅಷ್ಟನ್ನೇ ಅಳಿಸಿ ಹಾಕಬಹುದು.

## ಓಷನ್ಸ್

ಸಾಗರ ಸಂಪತ್ತಿನ ಮೇಲೆ ಮಾನವನ ಚಟುವಟಿಕೆಗಳು ಬೀರಿದ ಪರಿಣಾಮಗಳನ್ನು ತಿಳಿಸುವ ಐಪ್ಯಾಡ್‌ನ ಉಚಿತ ಆ್ಯಪ್. ಛಾಯಾಚಿತ್ರಗಳು, ಗ್ರಾಫಿಕ್ಸ್, ಅನಿಮೇಶನ್ ಜೊತೆ ವಿವರಗಳಿವೆ. ಜೀವವೈವಿಧ್ಯಗಳನ್ನು ಉಳಿಸಿಕೊಂಡು ಕಡಲಿನ ಸಂಪನ್ಮೂಲಗಳನ್ನು ನಿರ್ವಹಿಸುವ ಬಗ್ಗೆ ಸಾಮಾನ್ಯರಿಗೂ ತಿಳಿವಳಿಕೆ ನೀಡುವ ಆ್ಯಪ್ ಇದು. ವೃತ್ತಿಪರ ಛಾಯಾಚಿತ್ರಗ್ರಾಹಕರು ತೆಗೆದ ಸುಂದರವಾದ ಚಿತ್ರಗಳಿವೆ. ಆ್ಯಪ್‌ನ ಪೇಜ್‌ನ ಯಾವುದೇ ಜಾಗದಲ್ಲಿ ಕುಟ್ಟಿದರೂ ಟೂಲ್‌ಬಾರ್ ಕಾಣಿಸಿಕೊಳ್ಳುತ್ತದೆ. ಇದನ್ನು ಸರಿಸುವ ಮೂಲಕ ವಿವರಗಳು ಹಾಗೂ ಚಿತ್ರಗಳನ್ನು ನೋಡಬಹುದು.




## ಕೂಲ್ ಟೈಲ್ಸ್

ವಿಂಡೋಸ್ ಫೋನಿನ ಮೇಲ್ಮೈ ಟೈಲ್ಸ್‌ಗಳಿಂದ ಕೂಡಿದ್ದು ಒಂದೇ ಕೈಯಲ್ಲಿ ಕೂಡಾ ಬಳಸಲು ಇದರಿಂದ ಸಾಧ್ಯ. ಕೂಲ್ ಟೈಲ್ಸ್ ಆ್ಯಪ್‌ನಿಂದ ಹೋಂ ಸ್ಕ್ರೀನ್ ಮೇಲೆ ಹಲವು ಚಟುವಟಿಕೆ ನಡೆಸಬಹುದು. ನಿಮ್ಮದೇ ಫೋಟೋವನ್ನು ಅದರ ಮೇಲೆ ಹಾಕಬಹುದು. ಟೈಲ್ಸ್ ಮೇಲೆ ಮೂಲ ಸೆಟಿಂಗ್‌ಗಳನ್ನು ಹೊಂದಿಸಬಹುದು. ಐಒಎಸ್ ಅಥವ ಆ್ಯಂಡ್ರಾಯ್ಡ್‌ನ ಗ್ರಿಡ್ ಬಟನ್‌ಗಳನ್ನು ಕೂಡಾ ಈ ಟೈಲ್ಸ್‌ಗಳಿಗೆ ಬದಲಾಯಿಸಬಹುದು.







## 6ಟ್ಯಾಗ್

ವಿಂಡೋಸ್ ಫೋನಿನ ಈ ಆ್ಯಪ್ ಮೂಲಕ ಇನ್‌ಸ್ಟಾಗ್ರಾಂ ಬಳಸಿದಷ್ಟೇ ಅನುಭವ ಪಡೆಯಬಹುದು. ಫಿಲ್ಟರ್, ಟ್ಯಾಗಿಂಗ್ ಮೂಲಕ ಫೋಟೊ ಹಾಗೂ ವಿಡಿಯೋ ತೆಗೆಯಬಹುದು. ವಿಡಿಯೋಗಳನ್ನು ಸ್ಕೈಡ್ರೈವ್ ಕ್ಲೌಡ್ ಸಂಗ್ರಹದಲ್ಲಿ ಕಾಪಿಡಬಹುದು. ಫೋಟೋಗಳ ಮ್ಯಾಪ್ ವೀಕ್ಷಣೆ ಕೂಡಾ ಮಾಡಬಹುದು.

■ ಎಸ್. ತುಂಬೆ